ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ)

**ಸ್ಪೆ .ಸಿ. ಸಂಖ್ಯೆ 5053/2025**

ಫಿರ್ಯಾದುದಾರರು ಃ ಸರ್ಕಾರದ ಪರವಾಗಿ ಹನೂರು ಪೋಲಿಸ್ ಠಾಣೆ

ವಿರುದ್ಧ

ಆರೋಪಿ ಃ ಎಸ್. ಗಿರೀಶ್

**ದೋಷಾರೋಪಣೆ**

ಟಿ.ಸಿ. ಶ್ರೀಕಾಂತ್, ಬಿ.ಕಾಂ. ಎಲ್ಎಲ್ಬಿ., ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ) ಆದ ನಾನು,

ಆರೋಪಿ – ಎಸ್. ಗಿರೀಶ್

ನಿಮ್ಮ ಮೇಲೆ ಮಾಡುವ ದೋಷಾರೋಪಣವೇನೆಂದರೆ –

ಮೊದಲನೆಯದಾಗಿ, ಹನೂರು ತಾಲ್ಲೂಕು ಉದ್ದನೂರು ಗ್ರಾಮದ ಸರ್ವೇ ನಂ **31/ಎ2, 31/ಎ3, 32/3, 33/ಎ2** ರಲ್ಲಿ ಆರೋಪಿಯಾದ ನೀವು ಜಮೀನು ಹೊಂದಿದ್ದು, ಸದರಿ ಜಮೀನಿನ ಸುತ್ತಲೂ ಕಲ್ಲು ಮತ್ತು ಸಿಮೆಂಟ್ ಕಂಬಗಳನ್ನು ನೆಟ್ಟು ತಂತಿ ಬಳಸಿ ಫೆನ್ಸಿಂಗ್ ಮಾಡಿದ್ದು, ನಿಮ್ಮ ಜಮೀನಿನ ಸರ್ವೇ ನಂ.**33/ಎ2** ಜಮೀನಿನಲ್ಲಿ ಅಳವಡಿಸಿದ್ದ ಫೆನ್ಸಿಂಗ್ ಕಂಬಗಳ ಮೇಲೆ ಸುಮಾರು **120** ಮೀಟರ್ ದೂರದಲ್ಲಿರುವ ಪಂಪ್‌ಸೆಟ್‌ಗೆ ಅಲ್ಯೂಮಿನಿಯಂ ಸರ್ವಿಸ್ ವೈರ್‌ನ್ನು ಎಳೆದುಕೊಂಡು ಹೋಗಿ ಪಕ್ಕದ ಜಮೀನಿನ ಸಾಕ್ಷಿ–**06** ರವರ ಜಮೀನಿನಲ್ಲಿರುವ ವಿದ್ಯುತ್ ಕಂಬದಿಂದ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದುಕೊಂಡಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು ಇಂಡಿಯನ್ ಎಲೆಕ್ಟ್ರಿಸಿಟಿ (ತಿದ್ದುಪಡಿ) ಕಾಯ್ದೆ 2003 ರ ಕಲಂ 135 ರ ರೀತಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀಯ ಮತ್ತು ಆ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದಲ್ಲಿ ಮಾಡಿರುತ್ತೀಯ.

ಎರಡನೆಯದಾಗಿ, ಮೇಲೆ ತಿಳಿಸಿದ ದಿನಾಂಕ, ಸಮಯ, ಸ್ಥಳದಲ್ಲಿ ನಿಮ್ಮ ಜಮೀನಿನ ಸರ್ವೇ ನಂ.**33/ಎ2** ಜಮೀನಿನಲ್ಲಿರುವ ಪಂಪ್ ಸೆಟ್ಗೆ ಪಕ್ಕದ ಜಮೀನಿನ ಸಾಕ್ಷಿ–**06** ರವರ ಜಮೀನಿನಲ್ಲಿರುವ ವಿದ್ಯುತ್ ಕಂಬದಿಂದ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದು ನಿಮ್ಮ ಜಮೀನಿನಲ್ಲಿ ಅಳವಡಿಸಿದ್ದ ಫೆನ್ಸಿಂಗ್ ಕಂಬಗಳ ಮೇಲೆ ಸುಮಾರು **120** ಮೀಟರ್ ದೂರದಲ್ಲಿರುವ ಪಂಪ್‌ಸೆಟ್‌ಗೆ ಅಲ್ಯೂಮಿನಿಯಂ ಸರ್ವಿಸ್ ವೈರ್‌ನ್ನು ಎಳೆದುಕೊಂಡು ಹೋಗಿದ್ದು, ಸದರಿ ವೈರ್ ತುಂಬಾ ಹಳೆಯದಾಗಿದ್ದು ಬಿಸಿಲು ಮತ್ತು ಮಳೆಯಿಂದ ವೈರ್ ಮೇಲ್ಭಾಗದ ರಬ್ಬರ್ ಕೋಟಿಂಗ್ (ಸ್ಕಿನ್ ಔಟ್) ಕಿತ್ತು ಬಂದು, ಜಮೀನಿನ

ಸುತ್ತಲೂ ಆಳವಡಿಸಿದ್ದ ಕಲ್ಲು ಮತ್ತು ಸಿಮೆಂಟ್ ಕಂಬದಲ್ಲಿನ ಕಬ್ಬಿಣಕ್ಕೆ ಹಾಗೂ ತಂತಿಗೆ ವಿದ್ಯುತ್ ಸಂಪರ್ಕವಾಗಿದ್ದು, ಆರೋಪಿಯಾದ ನಿಮ್ಮ ಜಮೀನಿನಲ್ಲಿ ಸುಮಾರು 10-15 ವರ್ಷಗಳಿಂದ ಕೂಲಿ ಕೆಲಸ ಮಾಡಿಕೊಂಡಿದ್ದ ಮಾದೇಶ @ ಪಾರು ಎಂಬುವವರು ದಿನಾಂಕ 04-06-2025 ರಂದು ನಿಮ್ಮ ಜಮೀನಿಗೆ ಹಸುಗಳನ್ನು ಮೇಯಲು ಬಿಟ್ಟಿದ್ದು, ಹಸುಗಳು ಸಂಜೆಯಾದರೂ ಸಹ ಬಾರದೆ ಇದ್ದ ಕಾರಣ ಹುಡುಕಿಕೊಂಡು ಹೋಗಿದ್ದ ಸಮಯದಲ್ಲಿ ಸಂಜೆ 7-00 ರಿಂದ 7-30 ಗಂಟೆ ನಡುವೆ ಆರೋಪಿಯಾದ ನಿಮಗೆ ಸೇರಿದ ಸರ್ವೆ ನಂ 31/ಎ2 ಜಮೀನಿನ ಪಶ್ಚಿಮ ಭಾಗದಲ್ಲಿರುವ ಹೊನ್ನಯ್ಯ ಎಂಬುವವರ ಜಮೀನಿಗೆ ಹೊಂದಿಕೊಂಡಿರುವ ಜಮೀನಿನಲ್ಲಿ ಫೆನ್ಸಿಂಗ್‌ಗೆ ಅಳವಡಿಸಿದ್ದ ತಂತಿ ತಗುಲಿ ವಿದ್ಯುತ್ ಶಾಕ್‌ನಿಂದ ಸ್ಥಳದಲ್ಲೇ ಮೃತಪಟ್ಟಿದ್ದು, ವಿದ್ಯುತ್ ಕಂಬದಿಂದ ಪಂಪ್‌ಸೆಟ್ ವರೆಗೆ ಮರ ಅಥವಾ ವಿದ್ಯುತ್ ಕಂಬವನ್ನು ನೆಟ್ಟು ವಿದ್ಯುತ್ ಲೈನ್ ಎಳೆದುಕೊಂಡು ಹೋಗದೆ, ನಿಮ್ಮ ಜಮೀನಿನಲ್ಲಿ ಅಳವಡಿಸಿದ್ದ ಫೆನ್ಸಿಂಗ್ ಕಂಬಗಳ ಮೇಲೆ ಸರ್ವಿಸ್ ವೈರ್‌ನ್ನು ಎಳೆದುಕೊಂಡು ಹೋಗಿದ್ದು, ಸದರಿ ಸರ್ವಿಸ್ ವೈರ್‌ನಿಂದ ವಿದ್ಯುತ್ ಫೆನ್ಸಿಂಗ್ ತಗುಲಿ, ಫೆನ್ಸಿಂಗ್‌ನಲ್ಲಿ ವಿದ್ಯುತ್ ಹರಿದು ಮನುಷ್ಯರು, ಪ್ರಾಣಿಗಳು ಸಾಯಬಹುದು ಎಂಬ ಅರಿವಿದ್ದರೂ, ಆರೋಪಿಯಾದ ನೀವು ನಿರ್ಲಕ್ಷ್ಯತೆ ವಹಿಸಿದ ಕಾರಣ ಮಾದೇಶ @ ಪಾರು ಎಂಬುವವರು ವಿದ್ಯುತ್ ತಗುಲಿ ಮೃತಪಟ್ಟಿರುತ್ತಾರೆ, ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 106(1) ರ ರೀತಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ ಮತ್ತು ಆ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದಲ್ಲಿ ಮಾಡಿರುತ್ತೀರಿ.

ದಿನಾಂಕಃ 22-9-2025

(ಟಿ.ಸಿ. ಶ್ರೀಕಾಂತ್)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಚಾಮರಾಜನಗರ
(ಪೀಠಾಸೀನ ಕೊಳ್ಳೇಗಾಲ)

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ)

**ಸ್ಪೆ .ಸಿ. ಸಂಖ್ಯೆ 5053/2025**

ಪಿರ್ಯಾದುದಾರರು ः ಸರ್ಕಾರದ ಪರವಾಗಿ ಹನೂರು ಪೋಲಿಸ್ ಠಾಣೆ

ವಿರುದ್ಧ

ಆರೋಪಿ ः ಎಸ್. ಗಿರೀಶ್
ಬಿನ್ ಟಿ.ಸದಾಶಿವಮೂರ್ತಿ
42 ವರ್ಷ
ವಾಸಃ ಉದ್ದನೂರು ಗ್ರಾಮ, ಹನೂರು ತಾಲ್ಲೂಕು.

**ದೋಷಾರೋಪಣೆಃ**

ಪ್ರಶ್ನೆಃ 1: ಮೇಲೆ ಓದಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ 2: ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ

ದಿನಾಂಕಃ 22-9-2025

(ಟಿ.ಸಿ. ಶ್ರೀಕಾಂತ್)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಚಾಮರಾಜನಗರ
(ಪೀಠಾಸೀನ ಕೊಳ್ಳೇಗಾಲ)